ರಿಂಗ್ ರೋಡ್ ಹಿಡಿಯಬೇಕಾದರೆ ಸರಿಯಾಗಿ ಅರ್ಧಗಂಟೆ. ಅಂದರೆ, ಆರೂವರೆಯಾಗಿರುತ್ತಿತ್ತು. ಅಲ್ಲಿಂದ ಸಾಗಿ ರಿಂಗ್ ರೋಡ್ ದಾಟಿ ಹಲದಿರಾಮ್ ಎದುರು ಬರುವ ಹೊತ್ತಿಗೆ ಆರೂ ಮುಕ್ಕಾಲು ಆಗಿ ಹೋಗಿರುತ್ತಿತ್ತು. ಅಲ್ಲಿಯವರೆಗೆ ನಿಂತು ಕಿವಿಯಲ್ಲಿ ಇಯರ್ ಫೋನ್ ಹಾಕಿಕೊಂಡು ಹಾಡು ಕೇಳುತ್ತಲೋ, ಇಲ್ಲ ದಿನದ ಆಫೀಸ್ ವೇಳೆಯಲ್ಲಿ ಬಂದ ಸ್ನೇಹಿತರ ಕರೆಗಳನ್ನು, ಮಿಸ್ಡ್ ಕಾಲ್‌ಗಳನ್ನೊಮ್ಮೆ ನೋಡಿ ಅಗತ್ಯವಿದ್ದುವಕ್ಕೆ ನಾನೇ ಕರೆಮಾಡಿ ಮಾತಾಡುತ್ತಲೋ, ಇಲ್ಲ ಬಣ್ಣ ಬದಲಿಸುತ್ತಿರುವ ಆಕಾಶವನ್ನೂ ಗಿಡಮರಗಳನ್ನೂ ನೋಡುತ್ತಲೋ, ಇಲ್ಲ ಹಲದಿರಾಮ್ ಎದುರು ಕಾಯುತ್ತೇನೆ ಅಲ್ಲಿಗೆ ಬಾ ಎಂದ ಪ್ರಿಯಕರನಿಗಾಗಿ ಕಾಯುತ್ತ ನಿಂತ ಪ್ರೇಯಸಿಯರನ್ನು, ತನ್ನ ಕಚೇರಿಯ ಗೆಳತಿಯನ್ನು ಹಲದಿರಾಮ್‌ವರೆಗೂ ಡ್ರಾಪ್ ಕೊಡುವ ಹುಡುಗನನ್ನೂ, ಕಾರಿನೊಳಗೆಯೇ ತುಸುಹೊತ್ತು ಕೂತು ಅವನೊಂದಿಗೆ ಹರಟಿ, ಲಲ್ಲೆಗರೆದು, ನಕ್ಕುನಗಿಸಿ ಲೋಕ ಏನಾದರೂ ಹಾಳಾಗಿಹೋಗಲಿ ಎನ್ನುವಂತೆ ಡ್ರೈವರ್ ಸೀಟಿನಲ್ಲಿದ್ದವನ ಮುಖವನ್ನೊಮ್ಮೆ ಬರಸೆಳೆದುಕೊಂಡು ಮುತ್ತಿಕ್ಕಿ ಏನೂ ಆಗಲೇ ಇಲ್ಲವೆನ್ನುವಂತೆ ಹಗುರವಾಗಿ ಇಳಿದು ತನ್ನ ಸೀರೆ ನೆರಿಗೆಯನ್ನು ಚಿಮ್ಮಿಸಿಕೊಂಡು ಹಿಂದೆ ಅವನಿದ್ದಾನೊ ಇಲ್ಲವೋ ಎಂಬ ಚಿಂತೆಯನ್ನು ಅಲ್ಲೇ ಕೊಡವಿಕೊಂಡು ನಡೆಯುತ್ತಿದ್ದವಳ ಕಾಟನ್ ಸೀರೆಯನ್ನೇ ನೋಡುತ್ತಲೋ, ಇಲ್ಲ ಮನೆಗಾಗಿ ಹಲದಿರಾಮ್ ತಿನಿಸುಗಳನ್ನು ಕಟ್ಟಿಸಿಕೊಂಡು ಮಗನೋ, ಗಂಡನೋ ಪಿಕ್ ಮಾಡುತ್ತಾನೆಂದು ಕಾರ್ನರಿನಲ್ಲಿ ನನ್ನಂತೆ ಕಾಯುತ್ತ ನಿಂತ ಮಹಿಳೆಯನ್ನೂ ನೋಡುತ್ತ ನಿಲ್ಲಬೇಕಾಗಿರುತ್ತಿತ್ತು. ಮತ್ತೆ ಆ ಹೊತ್ತಿನಲ್ಲಿ ಮಾಡುವುದೇನೂ ಇದ್ದಿಲ್ಲ ನನಗೆ.

ಜಿಮ್ಮಿ ಹೀಗಂದಾಗ... ಏನು ಹೇಳಬೇಕೋ ತಿಳಿಯದೇ, ಇವತ್ತಾದರೂ ಅವನನ್ನು ಭೇಟಿಯಾಗಲೇಬೇಕು. ಬಹಳ ದಿನಗಳಿಂದ ನಾವಿಬ್ಬರೂ ಇಂದು ಸಿಗೋಣ, ನಾಳೆ ಸಿಗೋಣ ಎಂದುಕೊಂಡೇ ದಿನ ತಳ್ಳುತ್ತಿದ್ದೇವೆ ಅನಿಸಿ, 'ಲಿಸನ್, ನನ್ನ ಬಸ್ಸು ಫಿಲ್ಮ್ ಸಿಟಿ ತಲುಪೋದು ಏಳೂಕಾಲು ಆಗಬಹುದು.'

'ವಾಟ್ ಯೂ ಸೇ? ಟೆಲ್ ಮಿ.'

'ಓಹ್... ಇನ್ನೂ ಒಳ್ಳೆದಾಯ್ತಲ್ಲ... ನನಗೂ ಕೆಲಸ ಮುಗಿಸಿ ಅಲ್ಲಿಗೆ ತಲುಪೋದು ಏಳೂಗಂಟೆನೇ ಆದೀತು. ಸರಿ, ನೀನು ಫಿಲ್ಮ್ ಸಿಟಿಗೆ ಇಳಿದುಕೊಳ್ತೀಯಾ? ಅಥವಾ ಜಿಐಪಿಗಾ?' ಎಂದ ಜಿಮ್ಮಿಗೆ, 'ಇಲ್ಲ ಅಲ್ಲೇ ಫಿಲ್ಮ್ ಸಿಟಿಗೆ ಇಳಿದುಕೊಳ್ತೇನೆ, ಮತ್ತೆ ಆಟೊ ತಗೊಂಡು ಬರೋ ರಿಸ್ಕು ನಾ ತಗೆದುಕೊಳ್ಳೋದಿಲ್ಲವಪ್ಪ. ದರಿದ್ರ ಆಟೊದವರು ಸಿಗದಿದ್ದರೇನು ಮಾಡಲಿ? ಸಿಕ್ಕರೂ ಕೆಲವೊಮ್ಮೆ ಕರೆದಲ್ಲಿಗೆ ಬರೋದಿಲ್ಲ ಹಾಳಾದವರು.'

'ಆಯ್ತು, ಅಲ್ಲೇ ಕಾಯ್ತಿರೀನಿ, ಕಾರಲ್ಲಿ.'

'ಓಕೆ...'

ಹೀಗೆ ನಾನು ಮತ್ತು ಜಿಮ್ಮಿ ಫೇಸ್‌ಬುಕ್‌ನ ಕಿಟಕಿಯ ಹೊರಗೆ ಮೊದಲು ಭೇಟಿಯಾದದ್ದು. ಹಾಗಂತ ಅವನೇನೂ ಅಪರಿಚಿತನಲ್ಲ. ಹೆಸರು, ವೃತ್ತಿಯ ಪರಿಯವಿದ್ದೇ ಇತ್ತು. ಎಷ್ಟೋ ಬಾರಿ ಫೋನಿನಲ್ಲಿ ಮಾತಾಡಿದ ನೆನಪಿದೆ. ಸುಮ್ಮನೆ ವ್ಯವಹಾರಿಕವಾಗಿ. ಅಸೈನ್‌ಮೆಂಟ್ ಸಂಬಂಧಿತ ನೂರು ಮಾತುಗಳನ್ನು ಆಡಿದ್ದೇವೆ. ಆದರೆ, ಎಂದೂ ಭೇಟಿಯಾಗಿದ್ದಿಲ್ಲ. ಆಗುವ ಪ್ರಮೇಯವೂ ಇದ್ದಿಲ್ಲ. ಇತ್ತೀಚೆಗಷ್ಟೇ ನಾವಿಬ್ಬರೂ ಫೇಸ್‌ಬುಕ್‌ನಲ್ಲಿ ಮತ್ತೆ ಸಿಕ್ಕು ಹೈ, ಹಲೋ ಶುರುವಾಗಿತ್ತು. ಅವನೂ ಸಾಮಾನ್ಯದವನಲ್ಲ. ನಾಲ್ಕು ಜನರಲ್ಲಿ ಗುರುತಿಸಲ್ಪಡುವವನು;